# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ : ಕೇಂದ್ರ ಕಛೇರಿ : ಬೆಂಗಳೂರು

ಸಂ:ಬೆಂಮಸಾ/ಕೇಕ/ನೇಮಕ/ಶಿಶಿಕ್ಷು/ 1763 /2016-17 ದಿನಾಂಕ:01/09/2016

## ಶಿಶಿಕ್ಷು ಜಾಹೀರಾತು ಸಂಖ್ಯೆ:02/2016

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಶಿಶಿಕ್ಷು ಕಾಯ್ದೆ 1961ರ ಪ್ರಕಾರ ಅಗಸ್ಟ್-2016ರ ಅಧಿವೇಶನಕ್ಕೆ ಈ ಕೆಳಕಂಡ ತಾಂತ್ರಿಕ ಮತ್ತು ಗಣಕ ವೃತ್ತಿಗಳಲ್ಲಿ ಪೂರ್ಣಾವಧಿ ಶಿಶಿಕ್ಷು ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ವೃತ್ತಿಯ ಹೆಸರು | ತರಬೇತಿ ಅವಧಿ | ಒಟ್ಟು ಹುದ್ದೆಗಳು |
|---|---|---|---|
| 1 | ಡೀಸೆಲ್ ಮೆಕ್ಯಾನಿಕ್ | 3 ವರ್ಷ | 782 ಹುದ್ದೆಗಳು |
| 2 | ಶೀಟ್‌ಮೆಟಲ್ ವರ್ಕರ್ | 3 ವರ್ಷ | |
| 3 | ವೆಲ್ಡರ್ | 2 ವರ್ಷ | |
| 4 | ಆಟೋ ಎಲೆಕ್ಟ್ರಿಷೀಯನ್ | 2 ವರ್ಷ | |
| 5 | ಟರ್ನರ್ | 2 ವರ್ಷ | |
| 6 | ಫಿಟ್ಟರ್ | 2 ವರ್ಷ | |
| 7 | ಪಾಸ (PASAA) | 1 ವರ್ಷ | |

**I)** **ವಯೋಮಿತಿ** : ದಿನಾಂಕ:**19/09/2016** ರಂದು ಕನಿಷ್ಠ 16 ವರ್ಷ ತುಂಬಿರಬೇಕು ಮತ್ತು 26 ವರ್ಷ ಮೀರಿರಬಾರದು.

**II) ವಿದ್ಯಾರ್ಹತೆ :**

1) ಕ್ರಮ ಸಂಖ್ಯೆ 1 ರಿಂದ 6 ರವರೆಗಿನ ಶಿಶಿಕ್ಷು ತರಬೇತಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು.

2) ಕ್ರಮ ಸಂ.7 ರಲ್ಲಿ ಸೂಚಿಸಿರುವ ಪಾಸಾ (**Programming and System Administration Assistant**) ವೃತ್ತಿಯ ಶಿಶಿಕ್ಷು ತರಬೇತಿಗೆ ಐ.ಟಿ.ಐ ಕೋಪಾ (**Computer Operator and Programming Assistant**) ವೃತ್ತಿಯಲ್ಲಿ ತೇರ್ಗಡೆ ಹೊಂದಿರಬೇಕು.

**III) ಮೀಸಲಾತಿ:** ಪರಿಶಿಷ್ಠ ಜಾತಿಗೆ ಸೇರಿದ ಅಭ್ಯರ್ಥಿಗಳಿಗೆ 1:7 ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ 1:15ರ ಪ್ರಮಾಣದಲ್ಲಿ ಒಟ್ಟು ಹುದ್ದೆಗಳಲ್ಲಿ ಮೀಸಲಾತಿ ಕಾಯ್ದಿರಿಸಲಾಗಿದೆ.

**IV) ತರಬೇತಿ ಭತ್ಯೆ:** ಆಯ್ಕೆಗೊಂಡ ಶಿಶಿಕ್ಷು ಆರ್ಭ್ಯಥಿಗಳಿಗೆ ಈ ಕೆಳಕಂಡಂತೆ ಮಾಸಿಕ ತರಬೇತಿ ಭತ್ಯೆ ನೀಡಲಾಗುವುದು.

(ಅ) 1ನೇ ವರ್ಷ ರೂ. 2100/- ಹಾಗೂ ಹಾಜರಾತಿ ದಿನಗಳಿಗನುಗುಣವಾಗಿ ಪ್ರೋತ್ಸಾಹ ಧನ

(ಆ) 2ನೇ ವರ್ಷ ರೂ. 2400/- ಹಾಗೂ ಹಾಜರಾತಿ ದಿನಗಳಿಗನುಗುಣವಾಗಿ ಪ್ರೋತ್ಸಾಹ ಧನ

(ಇ) 3ನೇ ವರ್ಷ ರೂ. 2800/- ಹಾಗೂ ಹಾಜರಾತಿ ದಿನಗಳಿಗನುಗುಣವಾಗಿ ಪ್ರೋತ್ಸಾಹ ಧನ

### ಹಾಜರಾತಿ ಪ್ರೋತ್ಸಾಹ ಧನ

ಅ) ಶಿಶಿಕ್ಷು ತರಬೇತುದಾರು ತಿಂಗಳ 20 ಮತ್ತು ಅದಕ್ಕಿಂತ ಹೆಚ್ಚು ದಿನಗಳ ಹಾಜರಾತಿಗೆ (ಗರಿಷ್ಠ 25 ದಿನಗಳು) ಪ್ರತಿ ದಿನಕ್ಕೆ ರೂ.150/-ರಂತೆ ಪ್ರೋತ್ಸಾಹ ಧನವನ್ನು ತಿಂಗಳ ಹಾಜರಾತಿ ದಿನಗಳಿಗೆ ಲೆಕ್ಕಚಾರ ಮಾಡಿ, ಶಿಶಿಕ್ಷು ತರಬೇತಿದಾರರ ತರಬೇತಿ ಭತ್ಯೆಕ್ಕೆ ಸೇರಿಸಿ ನೀಡಲಾಗುವುದು.

ಆ) ತಿಂಗಳಲ್ಲಿ 19 ಅಥವ ಅದಕ್ಕೂ ಕಡಿಮೆ ದಿನಗಳ ಹಾಜರಾತಿಗೆ ದಿನಂಪ್ರತಿ ರೂ.100/-ಗಳಂತೆ ಪ್ರೋತ್ಸಾಹ ಧನವನ್ನು ತಿಂಗಳ ಹಾಜರಾತಿ ದಿನಗಳಿಗೆ ಲೆಕ್ಕಚಾರ ಮಾಡಿ, ಶಿಶಿಕ್ಷು ತರಬೇತಿದಾರರ ತರಬೇತಿ ಭತ್ಯೆಕ್ಕೆ ಸೇರಿಸಿ ನೀಡಲಾಗುವುದು.

**ಸೂಚನೆ:-ಶಿಶಿಕ್ಷು ತರಬೇತಿದಾರರು ಶಿಶಿಕ್ಷು ತರಗತಿಗೆ ಹಾಜರಾದ ದಿನ, ರಾಷ್ಟ್ರೀಯ ರಜೆ, ವಾರದ ರಜೆ ಮತ್ತು ಇತರೆ ಯಾವುದೇ ರಜೆಗಳನ್ನು ಪಡೆದ ದಿನಗಳಿಗೆ, ಈ ಪ್ರೋತ್ಸಾಹ ಧನದ ಸೌಲಭ್ಯವು ಅನ್ವಯವಾಗುವುದಿಲ್ಲ.**

**V) ಅರ್ಜಿ ಸಲ್ಲಿಸುವ ವಿಧಾನ;-**

ಶಿಶಿಕ್ಷು ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಅಭ್ಯರ್ಥಿಯ ಹೆಸರು, ವಿಳಾಸ, ಹುಟ್ಟಿದ ದಿನಾಂಕ, ವಿದ್ಯಾರ್ಹತೆ, ಜಾತಿ, ಅಪೇಕ್ಷಿತ ವೃತ್ತಿಯ ಮಾಹಿತಿಗಳನ್ನೊಳಗೊಂಡ ಹಾಗೂ ಅಂದವಾಗಿ ಬೆರಳಚ್ಚುಗೊಳಿಸಿದ ಅರ್ಜಿಯೊಂದಿಗೆ ಇತ್ತೀಚಿನ 02 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಸಂಬಂಧಪಟ್ಟ ಎಲ್ಲಾ ಮೂಲ ದಾಖಲಾತಿಗಳಾದ ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರ, ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ, ಐ.ಟಿ.ಐ ತೇರ್ಗಡೆ ಹೊಂದಿದ್ದಲ್ಲಿ ಅದರ ಪ್ರಮಾಣ ಪತ್ರಗಳೊಂದಿಗೆ ದಿನಾಂಕ:**19/09/2016** ರಂದು ಬೆಳಿಗ್ಗೆ **10.30** ಗಂಟೆಯಿಂದ ಸಂಜೆ **05.00** ಗಂಟೆಯೊಳಗಾಗಿ **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, 3ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಬೆಂಗಳೂರು-560027,** ಇಲ್ಲಿ ಖುದ್ದಾಗಿ ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗತಕ್ಕದ್ದು ಹಾಗೂ ಮೂಲ ದಾಖಲಾತಿಗಳ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಸಹ ತರುವುದು. ಅಪೂರ್ಣ ಅಥವಾ ವಿಳಂಬವಾಗಿ ಸಲ್ಲಿಸುವ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

**VI) ಸೂಚನೆಗಳು:-**

1) ಅಭ್ಯರ್ಥಿಗಳು ಕೋರಿರುವ ವೃತ್ತಿಯಲ್ಲಿ ಐ.ಟಿ.ಐ ವಿದ್ಯಾರ್ಹಹತೆಯಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹವರಿಗೆ ತರಬೇತಿ ಅವಧಿಯಲ್ಲಿ ರಿಯಾಯಿತಿಯನ್ನು ನೀಡಲಾಗುವುದು.
2) ಈಗಾಗಲೇ ಶಿಶಿಕ್ಷು ಕಾಯ್ದೆ 1961 ರನ್ವಯ ಶಿಶಿಕ್ಷು ತರಬೇತಿ ಪಡೆದಿರುವವರು ಪುನಃ ಅರ್ಜಿ ಸಲ್ಲಿಸಲು ಅರ್ಹರಲ್ಲ.
3) ಶಿಶಿಕ್ಷು ತರಬೇತಿ ಪಡೆಯುವ ಅಭ್ಯರ್ಥಿಗಳು ತಮ್ಮ ತರಬೇತಿ ಪೂರ್ಣಗೊಳಿಸಿದ ನಂತರ ಸಂಸ್ಥೆಯಲ್ಲಿ ಅವರಿಗೆ ಯಾವುದೇ ರೀತಿಯ ನೇಮಕಾತಿ ಮಾಡಿಕೊಳ್ಳುವ ಒಪ್ಪಂದಕ್ಕೆ ಒಳಪಟ್ಟಿರುವುದಿಲ್ಲ ಮತ್ತು ತರಬೇತಿ ಪಡೆಯಲು ಅರ್ಹತೆ ಪಡೆದವರು ಶಿಶಿಕ್ಷು ಕಾಯ್ದೆ 1961 ರ ನಿಯಮಗಳು, ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತಾರೆ.
4) ತಾಂತ್ರಿಕ ಶಿಶಿಕ್ಷು ತರಬೇತಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಉತ್ತಮ ದೇಹದಾರ್ಢ್ಯತೆ ಹೊಂದಿರಬೇಕು.
5) ಒಂದಕ್ಕಿಂತ ಹೆಚ್ಚಿನ ವೃತ್ತಿಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಆಭ್ಯರ್ಥಿಗಳು ಪ್ರತಿಯೊಂದು ವೃತ್ತಿಗಳಿಗೂ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

-ಸಹಿ-

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು